ಶ್ರೀ ಟಿ. ಸಿ. ಬಸಪ್ಪ.—ಈ ಉಪಪ್ರಶ್ನೆಯಲ್ಲಿ Rural Development ಬಾಬಿಗಾಗಿ ಎಷ್ಟು ಹಣ ಪಾಂಚ ವಾರ್ಷಿಕ ಯೋಜನೆಯಲ್ಲಿ ಒದಗಿಸಲಾಗಿದೆ?

Sri K. HANUMANTHAIYA.—The expenditure under Community Projects, National Extension Service Blocks and Local Development Works, Expenditure on wells in villages and for building houses for Scheduled Tribes and Scheduled Castes come under Rural Development Works.

Sri T. C. BASAPPA.—I want to know the amount provided under the Five-Year Plan for Rural Development Works.

Sri K. HANUMANTHAIYA.—It comes under these different heads.

ಶ್ರೀ ಟಿ. ಸಿ. ಬಸಪ್ಪ.—1951-52ರಿಂದ ಪ್ರತಿ ವರ್ಷವೂ Rural Development ಬಾಬಿನಲ್ಲಿ ಹಣ ಕಡಮೆ ಖರ್ಚಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Sri K. HANUMANTHAIYA.—It is not true.

ಶ್ರೀ ಟಿ. ಸಿ. ಬಸಪ್ಪ.—ಪರಿಶಿಷ್ಟದಲ್ಲಿ ಕೊಟ್ಟಹಾಗೆ 1951-52ರಲ್ಲಿ ಗ್ರಾಮಾಭಿವೃದ್ಧಿಗಾಗಿ 16 ಲಕ್ಷವೂ, 1952-53ರಲ್ಲಿ 9 ಲಕ್ಷವೂ, 1953-54ರಲ್ಲಿ 3 ಲಕ್ಷವೂ, 1954-55ರಲ್ಲಿ 6 ತಿಂಗಳಿಗೆ 2 ಲಕ್ಷವೂ ಹಣ ಖರ್ಚಾಗುತ್ತಿದೆ. ಹಣ ಕಡಿಮೆ ಖರ್ಚಾಗುತ್ತಿರುವುದು ಗೊತ್ತಿಲ್ಲವೇ?

Sri K. HANUMANTHAIYA.—The expenditure shown is under that one head.

ಶ್ರೀ ಟಿ. ಸಿ. ಬಸಪ್ಪ.—ಅದೇ Head ನೊಳಗೆ ಹಣ ಕಡಿಮೆ ಖರ್ಚಾಗುವುದರಿಂದ ಜನರು ಸೌಕರ್ಯಗಳನ್ನು ಹೆಚ್ಚಾಗಿ ಪಡೆದುಕೊಂಡಿಲ್ಲವೆಂಬುದು ಗೊತ್ತಾಗುವುದಿಲ್ಲವೇ?

Sri K. HANUMANTHAIYA.—The Hon'ble Member is drawing an inference.

ಶ್ರೀ ಟಿ. ಸಿ. ಬಸಪ್ಪ.—ಅದರ ಬಗ್ಗೆ ಸರ್ಕಾರದ ವರು ತಾಲ್ಲೂಕು ಕಮಿಟಿ ಜಾಗ್ರತೆಮಾಡಿ ಜನರ ಸಹಕಾರ ತೆಗೆದುಕೊಳ್ಳಬೇಕೆಂದು ಆಜ್ಞೆ ಆಗಿಲ್ಲವೇ?

Sri K. HANUMANTHAIYA.—That is still under consideration.

ಶ್ರೀ ಟಿ. ಸಿ. ಬಸಪ್ಪ.—ಈ ವಿಚಾರದಲ್ಲಿ ಸರ್ಕಾರೀ ಆರ್ಡರ್ ಆಗಿಲ್ಲವೇ?

Sri K. HANUMANTHAIYA.—That is still under considerasion.

ಶ್ರೀ ಟಿ. ಸಿ. ಬಸಪ್ಪ.—ಆದಷ್ಟು ಜಾಗ್ರತೆ ತಾಲ್ಲೂಕು ಕಮಿಟಿಗಳನ್ನು ಮಾಡಿ ಜನಗಳ ಸಹಕಾರ ಪಡೆದುಕೊಂಡು ಇನ್ನೂ ಹೆಚ್ಚಿಗೆ ರೂರಲ್ ಡೆವೆಲಪ್‌ಮೆಂಟ್ ಬಾಬಿನಲ್ಲಿ ಖರ್ಚು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

Sri K. HANUMANTHAIYA.—The Hon'ble Member is making a suggestion and I shall note it.

ಶ್ರೀ ಟಿ. ಸಿ. ಬಸಪ್ಪ.—ಮುಲೆನಾಡು Development Worksಗೆ ಪಾಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಒದಗಿಸಿದ್ದೀರಿ?

Sri K. HANUMANTHAIYA.—That is a question which has been answered several times.

ಶ್ರೀ ಟಿ. ಸಿ. ಬಸಪ್ಪ.—ಹಣ ಎಷ್ಟು ಒದಗಿಸಲಾಗಿದೆ?

Sri K. HANUMANTHAIYA.—I do not now remember. It has been answered several times.

ಶ್ರೀ ಟಿ. ಸಿ. ಬಸಪ್ಪ.—ತಾವು 25 ಲಕ್ಷ ಎಂದು ಹೇಳಿದ್ದೀರಿ. ಇಲ್ಲಿಯವರೆಗೆ ಖರ್ಚಾಗಿರುವುದು 14 ಲಕ್ಷವೆಂದು ಕೊಟ್ಟಿದ್ದಾರೆ. ಅದು ಬಹಳ ಕಡಮೆ ಯಲ್ಲವೇ?

Sri K. HANUMANTHAIYA.—That is not a correct reading of the picture.

Sri T. C. BASAPPA.—Are not the figures true, Sir?

Sri K. HANUMANTHAIYA.—The figures are true, but we take only the expenditure on one item and construe having reference to the whole problem.

Sri T. C. BASAPPA.—I am putting a particular question regarding one item.

ಮುಲೆನಾಡು ಡೆವೆಲಪ್‌ಮೆಂಟ್ ವರ್ಕ್ಸ್‌ಗೆಂದು ಹೇಳಿ 25 ಲಕ್ಷ ರೂಪಾಯಿಗಳನ್ನು provide ಮಾಡಿ ಕೇವಲ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಬಾಕಿ ಮೊಬಲಗನ್ನು ಕಡಮೆಮಾಡಿದಂತಾಗುವುದಿಲ್ಲವೇ?

Sri K. HANUMANTHAIYA.—He is drawing an inference, Sir. This occasion is meant to give information only; and the picture contains all the facts concerned. He has to total up all the figures; not only one set of figures but other figures also.

A. K. Boarding Homes.

Q.—213. **Sri T. HANUMAIYA** (Hiriyur—Scheduled Castes).—

Will the Government be pleased to state:—

(*a*) the total number of Government A. K. Boarding Homes for High Schools in the State with names, strength, allotments made each year

from 1945 onwards for boarding, clothing, books and stationery, washerman's allowance, barber allowance, etc., in a tabular form;

(*b*) what is the allotment under the above heads to each boarder per month;

(*c*) whether there is any difference in sanctioning the grants to different Boarding Homes; if so, why;

(*d*) whether it has come to their notice that the grant that is being paid to the Chitaldrug Government Boys' High School A. K. Boarding Home is lesser than all the Government High Schools A. K. Boarding Homes in the State?

A.—**Sri A. G. RAMACHANDRA RAO** (Minister for Law and Education).—

(*a*) 5.

For details please see statement attached.

(*b*) Generally no individual allotment is made for each boarder.

(*c*) The normal allotments made every year for each one of the Government Depressed Class Hostels in the State are in conformity with the needs of the concerned Hostel.

(*d*) No.

Statement showing the original allotment made to several Government Adikarnataka Boys' Boarding Homes for High Schools.

Sl. No.	Name of the Hostel	Strength	Boarding	Clothing	Books	Light and other charges	Total
			Rs.	Rs.	Rs	Rs.	Rs.
1	Sri Narasimharaja Hostel, Bangalore.	75	4,575	750	500	934	6,759
2	Depressed Class Hostel for Boys, Mysore	80	4,800	800	800	800	7,200
3	Adikarnataka Boarding Home for Girls, Mysore	60	5,720	1,300	650	1,560	9,555*
4	Adikarnataka High School Hostel, Hassan	45	2,925	450	450	400	4,225
5	Adikarnataka Free Boarding Home, Chitaldrug	50	5,000	500	500	500	6,500

* Including T.A. charges of Rs. 325.

(SRI A. G. RAMACHANDRA RAO.)

Statement showing the expenditure including sanction of additional allotment.

Year	Strength	Boarding	Clothing	Books and Stationery	Washerman's allowance	Barber allowance	Light and water charges	Visiting Doctor's allowance
1	2	3	4	5	6	7	8	9
		Rs.	Rs.	Rs.		Rs.	Rs.	Rs.
Sri Narasimharaja Hostel, Bangalore City.								
1946—47 ...	75	12,375	1,810	750	...	240	1,000	144
1947—48 ...	75	15,775	1,000	500	...	200	1,000	120
1948—49 ...	75	15,775	2,250	500	...	200	1,320	120
1949—50 ...	75	15,302	750	200	...	200	1,320	120
1950—51 ...	75	17,375	750	500	...	200	1,500	120
1951—52 ...	75	17,075	2,550	500	...	200	1,434	120
1952—53 ...	75	19,575	1,320	500	...	200	2,334	120
1953—54 ...	75	14,575	1,250	500	...	200	1,934	120
Government Depressed Class Hostel for Boys, Mysore.								
1950—51 ...	80	4,800	800	800	...	...	800	...
1951—52 ...	80	6,500	1,800	800	...	...	1,200	...
1952—53 ...	80	7,500	800	800	...	...	800	...
1953—54 ...	80	7,300	1,100	1,000	...	...	800	...
1954—55 ...	100	7,500	1,000	1,000	...	...	1,000	...
Government Adikarnataka Boarding Home for Girls, Mysore.								
1950—51 ...	60	5,720	1,300	650	...	...	1,560	...
1951—52 ...	60	6,720	1,300	650	...	...	1,560	...
1952—53 ...	60	5,720	1,300	650	...	...	1,560	...
1953—54 ...	60	6,920	1,300	650	...	...	1,560	...
1954—55 ...	60	6,720	1,300	650	...	...	1,560	...
Government Adikarnataka High School Hostel, Hassan.								
1949—50 ...	45	4,375	600	450	...	80	400	...
1950—51 ...	45	5,425	450	450	...	80	400	...
1951—52 ...	45	5,425	700	450	...	80	400	...
1952—53 ...	45	5,425	650	650	...	80	400	...
1953—54 ...	45	6,925	950	650	...	100	600	...
1954—55 ...	45	6,425	750	450	...	100	750	...
Adikarnataka Free Boarding Home, Chitaldrug.								
....	50	5,000	500	500	60	100	500	10 per mensem.

The same allotment is being sanctioned each year from 1948-49.

ಶ್ರೀ ಟಿ. ಹನುಮಯ್ಯ.—ಮೈಸೂರು ದೇಶದಲ್ಲಿರುವ ಎಲ್ಲಾ ಹರಿಜನ ಹಾಸ್ಟಲುಗಳಿಗೂ ಒಂದೇ ಕಾನೂ ನಿದೆಯೇ ಅಥವಾ ಆಯಾ ಸ್ಥಳಕ್ಕನುಗುಣವಾಗಿ ಬೇರೆ ಇದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಕ್ಕೂ ಒಂದೇ ಕಾನೂನು.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಬೆಂಗಳೂರಿನಲ್ಲಿರುವ ನರಸಿಂಹರಾಜಾ ಹಾಸ್ಟಲಿಗೆ ಹೇಗೆ ಹೆಚ್ಚಿಗೆ ಕೊಡುತ್ತಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲಿ ಕೊಟ್ಟಿರುವುದು ಆ ರೀತಿ ಇದೆ. ಬೇರೆ ಕಡೆ ಕಡಮೆ ಕೊಟ್ಟಿರುವುದಕ್ಕೂ ಇಲ್ಲಿ ಜಾಸ್ತಿ ಕೊಟ್ಟಿರುವುದಕ್ಕೂ ಕಾರಣ ವೇನೆಂದು ವಿವರಗಳನ್ನು ಕೇಳಿದ್ದೇವೆ.

ಶ್ರೀ ಟಿ. ಹನುಮಯ್ಯ.—ಒಂದು ಹೊತ್ತಿಗೆ ನೀಪು ಕೊಡುವ ಊಟದ ಚಾರ್ಜು ಎರಡೂವರೆಯಾಣೆ ಬಿದ್ದಂತಾಯಿತು. ಇತರ ಹಾಸ್ಟಲುಗಳಂತೆ ಇಲ್ಲಿಯೂ ಜಾಸ್ತಿ ಮಾಡಿಕೊಡುತ್ತೀರಾ ?

Sri K. HANUMANTHAIYA.—That is a suggestion the Hon'ble Member is making and we will note it.

ಶ್ರೀ ಟಿ. ಹನುಮಯ್ಯ.—ನರಸಿಂಹರಾಜಾ ಹಾಸ್ಟಲಿಗೆ ಕೊಡುವ ಹಣವನ್ನು ಇಷ್ಟು ಹೆಚ್ಚಿಗೆ ಕಾಣಿಸಿದರೂ, ನಿಮ್ಮ ಕಂಟ್ರಾಕ್ಟ್ ಕೊಡುವ ಪದ್ಧತಿಯಿಂದ ದುಡ್ಡು ಅಷ್ಟು ಆಗಿರದೆ ಇದ್ದರೂ ಖರ್ಚು ತೋರಿಸುತ್ತಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದುವರೆಗೂ ಅದು ನಮ್ಮ ಗಮನಕ್ಕೆ ಬಂದಿಲ್ಲ. ಆ ರೀತಿ ಕಂಡು ಬಂದರೆ, ಹಾಸ್ಟಲ್ ಅಧಿಕಾರವನ್ನು ಯಾವ ರೀತಿ ಮಾರ್ಪಾಡು ಮಾಡಿ ಮಿತವಾಗಿ ಖರ್ಚು ಮಾಡಬಹುದೋ ಯೋಚನೆ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಇದು ಸರ್ಕಾರಿ ಹಾಸ್ಟಲ್ ಆಗಿರುವುದರಿಂದ ಕಂಟ್ರಾಕ್ಟರನ್ನು ವಜಾ ಮಾಡಿ ನೇರವಾಗಿ ಮಾಡುವುದು ಸೂಕ್ತವಲ್ಲವೇ ?

Sri K. HANUMANTHAIYA.—That is a suggestion you are making.

ಶ್ರೀ ಜಿ. ಪುಟ್ಟಸ್ವಾಮಿ.—ಹದಿನೈದನೆಯ ಪುಟದಲ್ಲಿ ಚಿತ್ರದುರ್ಗದ ಹಾಸ್ಟಲಿಗೆ 5,000 ರೂಪಾಯಿಗಳನ್ನು ಕೊಟ್ಟಿರುವುದಾಗಿ ತೋರಿಸಿದೆ. ಹಾಸನಕ್ಕಾದರೋ 2,925 ರೂಪಾಯಿಗಳನ್ನು ಮಾತ್ರ ಕೊಟ್ಟಿದೆ. ಇದನ್ನು ನೋಡಿದರೆ ಹಾಸನಕ್ಕೆ ಕೊಟ್ಟಿರುವುದು ಬಹಳ ಕಡಮೆಯೆಂದು ತೋರುತ್ತದೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು initial ಗ್ರಾಂಟನ್ನು ಸೂಚಿಸುತ್ತದೆ. ಮುಂದೆ ಎಷ್ಟನ್ನು ವರ್ಷೇ ವರ್ಷೇ ಹೆಚ್ಚಿಸಿಕೊಂಡು ಬಂದಿದೆಯೆಂದು ಸೂಚಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಹೀಗೆ ಕಡಮೆಯಾಗಿರುವ ಹಣವನ್ನು ಹೆಚ್ಚು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಚೆಗೆ ಹೋಲಿಸಿ ನೋಡಿ. ಹೆಚ್ಚಾಗಿಯೇ ಕೊಟ್ಟಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಬೇರೆ ಹಾಸ್ಟಲುಗಳನ್ನು ನೋಡಿದರೆ ಈ ಹಾಸ್ಟಲಿಗೆ ಕೊಟ್ಟಿರುವುದು ಬಹಳ ಕಡಮೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಯಾ ಹಾಸ್ಟಲಿಗೆ ಎಷ್ಟು ಖರ್ಚಾಗುತ್ತದೆಯೆಂಬುದನ್ನು ನೋಡಿ ಕೊಟ್ಟಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ನೀವೀಗ economy measuresನ್ನು ಅಲ್ಲಿ ತಂದಿರುವುದರಿಂದ ನಿಮ್ಮ ನಿರ್ಬಂಧಕ್ಕಾಗಿ ಉಳಿತಾಯ ಮಾಡುತ್ತಾರೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ವ್ಯರ್ಥವಾಗ ಕೂಡದೆಂಬುದನ್ನು ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ರಾಚಯ್ಯ.—ಮೈಸೂರು ಡಿಪ್ರೆಸ್ಡ್ ಕ್ಲಾಸ್ ಹಾಸ್ಟಲಿಗೆ ತಿಂಗಳೊಂದಕ್ಕೆ ಒಬ್ಬೊಬ್ಬರಿಗೆ ಊಟದ ಚಾರ್ಜು ಆರು ರೂಪಾಯಿಗಳಂತೆ ಬೀಳುತ್ತದೆ. ಮುಂಚೆ ಹಾಸ್ಟಲು ಸ್ಥಾಪನೆಯಾದಾಗ ಗೊತ್ತು ಮಾಡಿದ್ದ ಗ್ರಾಂಟ್ ಇದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಚೆಗೆ ಕೊಟ್ಟಿರುವುದನ್ನು ಹದಿನಾರನೆಯ ಪುಟದಲ್ಲಿ ಕೊಟ್ಟಿದೆ.

ಶ್ರೀ ಬಿ. ರಾಚಯ್ಯ.—ಈ ಗ್ರಾಂಟಿನ್ನೂ ಸಹ ವರ್ಷದ ಕೊನೆಯ ಭಾಗದಲ್ಲಿ ಕೂಡುತ್ತಿರುವುದರಿಂದ ವರ್ಷದ ಮೊದಲನೆಯ ಭಾಗದಲ್ಲಿ ಹುಡುಗರಿಗೆ ಬಹಳ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಈ ವಿಚಾರದಲ್ಲಿ ಸೆಂಟ್ರಲ್ ಬೋರ್ಡಿನಿಂದ ಪದೇ ಪದೇ ನಿರ್ಣಯಗಳಾಗಿ ಸರ್ಕಾರಕ್ಕೆ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಂಡ್ಯ ಡಿಸ್ಟ್ರಿಕ್ಟ್ ನಲ್ಲೊಂದು free ಹಾಸ್ಟಲನ್ನು ಕೊಡಬೇಕೆಂದು ನಿರ್ಣಯಮಾಡಿ ಸರ್ಕಾರಕ್ಕೆ ಕಳುಹಿಸಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಆರ್. ಮುನಿಸ್ವಾಮಯ್ಯ.—ಹೆಣ್ಣುಮಕ್ಕಳಿಗಾಗಿರುವ ಮೈಸೂರು ಆದಿಕರ್ಣಾಟಕ ಬೋರ್ಡಿಂಗ್ ಹೋಮಿನಲ್ಲಿ ಹೆಣ್ಣುಮಕ್ಕಳಿಗೆ ಸರಿಯಾಗಿ ಅವಕಾಶ ಸಿಕ್ಕುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ನಾಳೆ ಎರಡನೆಯ ತಾರೀಖು ಮುಖ್ಯ ಮಂತ್ರಿಗಳು ಮೈಸೂರಿಗೆ ಹೋದಾಗ ಈ ಹಾಸ್ಟಲಿಗೊಮ್ಮೆ ದಯವಿಟ್ಟು ಬೇಟಿ ಕೊಡುತ್ತಾರೆಯೇ ?

ಶ್ರೀ ಕೆ. ಹನುಮಂತಯ್ಯ.—ನೋಡೋಣ.

ಶ್ರೀ ಜಿ. ದುಗ್ಗಪ್ಪ.—ಒಂದು ತಿಂಗಳಿಗೆ ಒಬ್ಬೊಬ್ಬರಿಗೆ ಹತ್ತು ರೂಪಾಯಿಗಳಂತೆ ಕೊಟ್ಟರೆ ಸಾಕಾಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಟ್ಟಿನಲ್ಲಿ ಮಾಡುವಾಗ ಸಾಕಾಗುತ್ತದೆಂದು ಭಾವಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಸಾಕಾಗುವುದಿಲ್ಲವೆಂದು ಹೇಳಿ ಮ್ಯಾನೇಜ್‌ಮೆಂಟಿನವರು ಆಗಾಗ್ಗೆ ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.